"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯುರಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 17 | ಮಂಗಳವಾರ 2—10—45 | ಬೆಲೆ ಪ್ರತಿ 3 ಪೈ

ಭಾರತದ ಸ್ವಾತಂತ್ರ್ಯ 1946 ರಲ್ಲಿ

ಈ ದಿನದ ಗಾಂಧೀ ಜಯಂತಿ

ಗಾಂಧೀಜೀ ಚಿರಾಯುವಾಗಲಿ

ಗಾಂಧೀ ಜಯಂತಿ ಉತ್ಸವಗಳು ಭಾರತಾದ್ಯಂತ ಮತ್ತು ಪರದೇಶದ ಹಲವೆಡೆಗಳಲ್ಲಿ ಆಚರಿಸಲ್ಪಡುವುದು.

ವೃತ್ತಾಂತ ಸಂಗ್ರಹ

ಬೆಂಗಳೂರಿನಲ್ಲಿನ ಮೈಸೂರು ಪತ್ರಿಕೋದ್ಯೋಗಿ ಸಂಘದ ಮಾಟಿಂಗು ಕಳೆದ ತಾ || 30 ರಲ್ಲಿ ನಡೆದು, ಗಾಂಧೀಜಿಯವರಿಗೆ 77 ನೇ ವರ್ಧಂತ್ಯುತ್ಸವ ಸಂಬಂಧದಲ್ಲಿ ಅವರನ್ನು ಅಭಿನಂದಿಸಿ, ಅವರು ದೀರ್ಘ ಕಾಲದವರೆಗೆ ಮಾನವ ಸೇವೆ ಮಾಡಲು ಭಗವಂತನು ಕರುಣಿಸಲೆಂದು ಶುಭಾಶಯ ಮಾಡಲಾಯಿತು.

o o

ಭದ್ರಾವತಿ, ಬೆಂಗಳೂರು ಕೋಲಾರದ ಕೂಲಿಗಾರರ ಮೇಲಿನ ಪ್ರತಿಬಂಧಕ ಆಜ್ಞೆಗಳನ್ನು ಹಿಂದೆಗೆದುಕೊಂಡಿರುತ್ತೇವೆಂದು 4 ನೇ ತಾ || ಪ್ರಭುತ್ವದ ಆಜ್ಞೆ ಹೊಂಬೀಳಲಿದೆಯಂತೆ. (ವಿ. ಕ.)

o o

ಲಂಡನ್ನಿನಲ್ಲಿ ಮೈಸೂರು ಸಂಸ್ಥಾನದ ಟ್ರೇಡ್ ಕಮಿಷನರಾಗಿ ಸಿ ವಿ ಎಲ್ ಸಹ್ಲ್ಮ ಕಟ್ರೋಲರ್ ಶ್ರೀ ಗಣಪತಯ್ಯನವರು ನೇಮಿಸಲ್ಪಡುವರೆಂದು ತಿಳಿಯುಬಂದಿದೆ.

ಹಿಮಾಲಯದ ಜ್ಯೋತಿರ್ಮಠದ ಸ್ವಾಮಿಗಳ ಸಲಹಾಧಿಕಾರಿಯು, ವೈಸರಾಯರು ಭಾರತಮಂತ್ರಿಯವರನ್ನು ಮತ್ತೆ ನೋಡುವರೆಂದೂ, 1946 ನೇ ಫೆಬ್ರುವರಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದೆಂದು ಭವಿಷ್ಯ ಹೇಳಿರುವರ.

ಜಪಾನ್ ಸೈನ್ಯದ 7 ನೇ 4 ಭಾಗ ವಿಸರ್ಜಿಸಲಾಗಿದೆ. ಹಿರೋಹಿಟೋರ ರಾಜ್ಯಪರಿತ್ಯಾಗವನ್ನು ಯಾವ ಪಾರ್ಟಿಯವರೂ ಇಚ್ಛಿಸುತ್ತಿಲ್ಲ.

ಬೀಹಾರಿನಲ್ಲಿ ರೇಷನ್ ಪದ್ಧತಿ 1951—52 ರವರೆಗೆ ಜಾರಿಯಲ್ಲಿರಬಹುದೆಂದು ಹೇಳಲಾಗಿದೆ.

ಸ್ಟಾಲಿನ್ನರು ನಿವೃತ್ತರಾಗುವ ಸಂಭವವಿಲ್ಲವೆಂದು ಎಡ್ಗಾರ್ ಸ್ನೋ ಅಭಿಪ್ರಾಯಪಟ್ಟಿದ್ದಾರೆ.

ಜಪಾನ್ ಪಟ್ಟಣದ ಪೌರಸಭೆಗೆ ಶ್ರೀ ಎಲ್. ಸಿ. ಶ್ರೀನಿವಾಸರಾಯರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ.

ಬನಾರಸ್ ಡಿ || ನಲ್ಲಿ 1942 ರಲ್ಲಿ ಪೋಲೀಸರ ಗುಂಡು ಹೊಡೆತದಿಂದ 17 ಮಂದಿ ಸತ್ತಿರುವರು.

ಇಂಡೋನೇಷ್ಯಾದಲ್ಲಿ ಫ್ರೆಂಚರಿಗೂ ಅನೆಸ್ಥೆಟರಿಗೆ ಕಳೆದ ಭಾನುವಾರ ಹೊತ್ತಿದ ದಾಳವಾಗಿ 30 ಮಂದಿ ಸತ್ತರು.

ಷಾಂಘಾಯಿನಲ್ಲಿ 2400 ಮಂದಿ ಜರ್ಮನರು ನಿರ್ಬಂಧದಲ್ಲಿಡಲ್ಪಟ್ಟಿದ್ದಾರೆ.

ಹಿಂದೂಸ್ಥಾನ ಸರಕಾರದವರು ಯುದ್ಧೋತ್ತರ ಕಾಲದಲ್ಲಿ ದಶಾಂಶ ರೂಪಕವಾದ ಹೊಸ ನಾಣ್ಯಗಳನ್ನು ತೆಗೆಯುತಕ್ಕವರಿದ್ದು ಅವುಗಳ ಉತ್ಪತ್ತಿಯನ್ನೆಯ ಮಾದರಿಯನ್ನು ಕಳಿಸುವ ಕಲಾವಿದನಿಗೆ ರೂ. 2000 ಇನಾಮಾಗಿ ಕೊಡುವುದಾಗಿ ಪ್ರಕಟಿಸಿದ್ದಾರೆ.

ಬಾಪುವಿನ ಹುಟ್ಟುದಿನ

ಬಾಪುವಿನ ಬಾಳುವೆಯು ಹೊಸದೂ ಹೌದು, ಹಳೆಯದೂ ನಿಜ. ಅದೊಂದು ಮಹಾಪೂರದಂತೆ ವೇಗವಾಗಿ ಹರಿಯುತ್ತಿರುವ "ಮಧುರಜೀವನ!" ಭಾರತದ ಗುಲಾಮಗಿರಿಯನ್ನು, ಅಸ್ಪೃಶ್ಯತೆ, ಹಿಂಸಾಭಾವ ಮೊದಲಾದ ಹಿನಾಯ ನೈರ್ಮಾಲ್ಯವನ್ನು ಕೊಳೆಯುವುದರಲ್ಲೇ ಅಂದಿದಿನದಿಂದ ತುಂಬಿ ಹರಿದಿದೆ. ಗಾಂಧೀ ಅವರು ಈಗ ತನ್ನ ಎಪ್ಪತ್ತಾರನೆಯ ಹೊಸಲನ್ನು ದಾಟುತ್ತಿರುವರು. ಅವರ ಅನಂತವಾದ ಬಾಳಿನಲ್ಲಿ ಈ ವರ್ಷವು ಒಂದು ಬಿಂದು ಸಮಾನ ಆದರೆ ಅದು ಅಖಿಲ ವಿಶ್ವದ, ಇತಿಹಾಸದ ಪ್ರಾಮುಖ್ಯವಾದ ಘಳಿಗೆಗಳು. ಬಾಪು ಅವರು ಈ ವರ್ಷದಲ್ಲಿ ತನ್ನ ನಾಡಿಗೆ ಅತ್ಯಮೋಘ ಸೇವೆಯನ್ನರ್ಪಿಸಿರುವರು. ತನ್ನ ಖಂಡಕಾಲದ ಸೆರೆವಾಸದಲ್ಲಿ, 'ಬಾ', ಮಹದೇವ ಬಾಯಿಯಾ ಮೊದಲಾದ ಅಮೂಲ್ಯವಾದ ಅವಶ್ಯಾರತ್ನಗಳನ್ನ ಕಳಕೊಂಡ ದುಃಖದೆಡೆಯಲ್ಲಿ ಬೆಂದು ಬಸವಳಿದು ಹೋಗಿಬಿಂದರು. ಆದರೆ ಏನು? ಅವರಿಗೆ ವಿರಾಮವಿಲ್ಲ ಅವರು ಭಾರತದ ಉಸಿರು. ಅವರು ಸ್ತಬ್ಧರಾದರೆ, ಭಾರತವೆಲ್ಲಾ ಸ್ತಬ್ಧವಾಗಿ-ಮುಮು

ಬಾಪೂ ತನ್ನ ಅಸೆಯ ದೃಷ್ಟಿಯನ್ನು ಪುನಃ ಸತ್ಕಾರದೆಡೆಗೆ, 'ಸಂಘಟನೆ' ಅತ್ತ ಹರಿಸಿದರು. ಅವರ ಲೇಖನಿಯಿಂದ ಜಿನ್ನಾ-ಗಾಂಧಿ ಪತ್ರವ್ಯವಹಾರವು ಸಾಗಿತು. ಅದರೊಂದಿಗೇ ಜಿನ್ನಾ ಭೇಟಿ! ಅದೆಂತಹಾ ಎಂಚೊಮ್ಮೆ ಮಿಂಚಿತು ದೇಶವೆಲ್ಲಾ? ಅದೆಂತಹ ಅಸೆಯ ಕಿರಣವನ್ನು ಬೆಳಗಿಸಿದರು ಬಾಪು! ದೇಹಶ್ರಮ, — ಅಭಿಮಾನ — ಸೋಲುಗಳ ಪರವೆ ಇಲ್ಲದೆ ವಾಸಿಸಿದರು ಅವರು. ಆದರೆ ಸಾಧಿಸಲಿಲ್ಲ. ನಿರಾಸೆಯೆಂಬುದಿಲ್ಲ ಅವರಿಗೆ

"ನಾನು ದುಡಿಯಲಿರುವೆ. ಎಲ್ಲವೂ ಅವನ ಕೈವಾಡ" ಎಂಬುದು ಅವರ ಮಾತು. ಹಾಗೆ ವೈಸರಾಯ್ — ಗಾಂಧಿ ಮಾತುಕತೆಗಳನ್ನು ಮುಂದಿಟ್ಟರು. ಬಾಪೂ — ಗಾಂಧೀಜಿ ಪುನಃ ಕಾರ್ಯರಂಗದಲ್ಲಿ ಸೆಣಸಲು ಸೊಂಟಕಟ್ಟಿದರು. ಅದರ ಫಲವಾಗಿ ಸಿಮ್ಲಾ ಪರಿಷತ್ತಿ ಘೋಷಣೆ ಹೊರಟಿತು. ನಾಡಿನ ಕೋಟ್ಯಾನುಕೋಟಿಯ ಎದೆಯಲ್ಲಿ ಪುನಃ ನಿರೀಕ್ಷಣೆಯ ತೆರೆ ಎದ್ದಿತು. ಬಾಪೂ ತಣಿಯಲಿಲ್ಲ. ತನಗಾಗಿ ಒಂದು ಕರೆಯನ್ನು ಮಾಡಿತು, 'ನಾನು ಒಬ್ಬಲಾರೆ. ಆಜಾದ್, ನೆಹರೂ ಮೊದಲಾದ ಅಲ್ಲಿ ಬರಬೇಕು' ಎಂದು ಅಲ್ಲೂ ವಾದಕ್ಕೆ ನಿಂತರು. 'ದೇಶ ಕಲ್ಯಾಣ ಸ್ವಾತಂತ್ರ್ಯ' ಅದು ಅವರ ನೆಡೆನುಡಿಯ ತಳಹದಿ!

(ಮುಂದುವರಿಯುವುದು)

೩ ಪತ್ರಿಕೆಗಳ ಮೇಲೆ ಮುಟ್ಟುಗೋಲು

ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾದ ಅಮೇರಿಕಾ ಪತ್ರಿಕಾ ಪ್ರತಿನಿಧಿ ಮತ್ತು ಹಿರೋಹಿಟೋ ಭೇಟಿಯ ವಿವರಗಳನ್ನು ಎತ್ತಿ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವೆಂದು ಜಪಾನಿನ ೩ ಪತ್ರಿಕೆಗಳ ಪ್ರಕಟಣೆಯ ಮೇಲೆ ಮುಟ್ಟುಗೋಲು ಹಾಕಲಾಗಿದೆ.

ಮುಂಬಯಿ ಗಲಾಟೆ

ಮುಂಬಯಿನಲ್ಲಿ ವರ್ತಮಾನ ಗಲಭೆ ಮತ್ತು ತಿವಿತದ ಘಟನೆಗಳು ನಡೆದಿವೆ. ಮುಂಬಯಿನಲ್ಲಿ ಛೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅರು ಪತ್ರಿಕೆಗಳಿಗೆ ಬಚ್ಚಲಿಕೆ ಆಜ್ಞೆಯನ್ನು ಜಾರಿಮಾಡಿ, ಕೋಮುವಾರು ಉದ್ರೇಕವನ್ನುಂಟುಮಾಡುಗಲಭೆ ವಿವರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಕೂಡದೆಂದಿರುವರು.

ಅನಾವರಣೋತ್ಸವ

ಬೆಂಗಳೂರು ವಿಶ್ವವಿದ್ಯಾನಿಲಯದ ಯೂನಿಯನ್ ಆಶ್ರಯದಲ್ಲಿ ಮುದರಾಜ ನ ಸಿ. ರಾಜಗೋಪಾಲಚಾರ್ಯರು ಶ್ರೀಮತಿ ಕಸ್ತೂರಿಬಾ ಗಾಂಧಿ ಮತ್ತು ರಾಷ್ಟ್ರಪತಿ ಆಜಾದ್‌ರವರ ಭಾವಚಿತ್ರ ಅನಾವರಣ ಮಾಡುವರು.

ಭಾರತಕ್ಕೆ ಸ್ಥಾನವಿದೆ

ದೂರಪ್ರಾಚ್ಯ ಕಮಿಷನ್ನಿನಲ್ಲಿ ಭಾರತಕ್ಕೊಂದು ಸ್ಥಾನವಿರಬೇಕೆಂಬ ಬ್ರಿಟನ್ನಿನ ಸೂಚನೆಯನ್ನು ಅಮೇರಿಕಾ ಅನುಮೋದಿಸಿದೆ.

ರಷ್ಯಾಸೇನೆ ವಾಪಸು

ರಷ್ಯಾ ಸೇನೆಗಳು ಮಂಚೂರಿಯಾ ಬಿಡಲಾರಂಭಿಸಿವೆ.

ಧರ್ಮಯುದ್ಧಕ್ಕೆ ಸಿದ್ಧ

ಪ್ಯಾಲಿಸ್ಟೈನನ್ನು ವಿಭಾಗಿಸಿದರೆ ೪ ರಬ್ಬರು ಧರ್ಮಯುದ್ಧ ನಡೆಸುವುದಾಗಿ ತಿಳಿಸಿದ್ದಾರೆ.

ಜಪಾನ್ ಮಂತ್ರಿಯು ದಸ್ತಗಿರಿ

ಪರ್ಲ್‌ಹಾರ್ಬರ್ ದುರಂತದ ಸಮಯದಲ್ಲಿ ಜಪಾನ್ ವಿದೇಶಕಾರ್ಯ ಮಂತ್ರಿಯಾಗಿದ್ದ ಶ || ಟೋಗೋರವರು ಯುದ್ಧ ತಕ್ಷೀರುದ್ಧಾರಾರ್ಥವಾಗಿ ದಸ್ತಗಿರಿ ಮಾಡಲ್ಪಟ್ಟರು.

ಯಹೂದ್ಯರನ್ನು ಸೇರಿಸಿ

೪೦ ಸಹಸ್ರ ಯಹೂದ್ಯರನ್ನು ಜರ್ಮನಿಗೆ ಸೇರಿಸಿರೆಂದು ಬ್ರಿಟನ್ನಿಗೆ ಪ್ರೆಸಿಡೆಂಟ್ ಟ್ರೂಮನ್ ವಿನಂತಿಯಾಗಿದೆ.

ಹಲ್ಲಿನಲ್ಲಿ ಹೆಂಡತಿ

ಇದು ಒಂದು ಮತ್ತೊಂದು ಸ್ವಾರಸ್ಯದ ಕತೆ. ಬೊಂಬರ್‌ಪ್ಲೇಟ್ ಕ್ಯಾಪ್ಟನ್ ವಿಲಿಯಂ ಬುಸ್ಕ್ ಎನ್ನುವನಿಗೆ ಸಂಬಂಧಪಟ್ಟದ್ದು. ಈ ಬುಶ್ಕನು ಬಗತ್ತಿನ ಯಾವದೇ ಭಾಗದಲ್ಲಿ ರಲಿ ಬಂದು ಭಾರಿ ಕನ್ನಡಿಯೊಳಗೆ ತನ್ನ ರೂಪು ನೋಡಿದನೆಂದರೆ ಅವನಿಗೆ ತನ್ನ ಪತ್ನಿಯು ದರ್ಶನವಾಗುತ್ತಿತ್ತು. ಹೇಗೆಂದು ಬಲ್ಲಿರಾ ! ಅವನ ಬಾಯಿಯಲ್ಲಿ ಒಂದು ಕೃತಿಕ ಹಲ್ಲಿದೆ. ಇದನ್ನು ಏಚಿತ್ರ ರೀತಿಯಲ್ಲಿ ರಚಿಸಲ್ಪಟ್ಟಿದೆ. ಮುಂದಿಕ ಸವಾಸರ್ ಪೋರ್ಟ್ರಿಸ್ ಪ್ಲೆಕ್ಸಿಗ್ಲಾಸಿನಿಂದ ರಚನೆಯಾದುದು. ಹಿಂಭಾಗ ಜಪರ್ಷ ನಾಣ್ಯದಿಂದ ನಿರ್ಮಿಸಲ್ಪಟ್ಟಿದೆ. ಈ ಹಲ್ಲಿನಲ್ಲಿ ತನ್ನ ಪತ್ನಿಯ ಚಿಕ್ಕ ಫೋಟೋ ಇರಿಸಿದ್ದಾನೆ. ಕನ್ನಡಿ ನೋಡಿ ಹಲ್ಲು ಬಿಟ್ಟನೆಂದರೆ ಪತ್ನಿಯ ಪ್ರತ್ಯಕ್ಷ ದರ್ಶನವಾಗುತ್ತದೆ. [ಪ್ರ

ಅಂಕೋಲಾದಲ್ಲಿ ಹರಿಜನರ ಬಗ್ಗೆ ಬೇಗನೆ ಒಂದು ಕೊಆಪರೇಟಿವ್ ಸೊಸೈಟಿ ಸ್ಥಾಪಿಸಲಾಗುವದು.

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಕೂಡಲೇ ಚಂದಾದಾರರಾಗಿ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ.

ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-13-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ ಮೈಸೂರು

ನೈರ್ಮಲ್ಯವೆ ಆರೋಗ್ಯದ ಅಡಿಗಲ್ಲು

" ನಿಮ್ಮ ಮಕ್ಕಳು ಆರೋಗ್ಯವಂತರಾಗಿಯೂ, ಚಿರಂಜೀವಿಗಳಾಗಿಯೂ ಇರಬೇಕೇ "?

ಹಾಗಾದರೆ

ನಿಮ್ಮ ಮನೆಗಳನ್ನು, ನಿಮ್ಮ ಬೀದಿಗಳನ್ನು, ನಿಮ್ಮ ಮೊಹಲ್ಲವನ್ನು ಚೊಕ್ಕಟವಾಗಿಡಿರಿ. ಕಸವನ್ನು ಮುನಿಸಿಪಾಲಿಟಿ ತಿಪ್ಪೆಗೆ ಹಾಕಿ.

[ಪೌರಸಭಾ ಪ್ರಚಾರ ಸಮಿತಿ, ನೈ.]

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಭಾರಿ ಮದ್ದಿನ ಕಾರ್ಖಾನೆ

ಭಾರತ; ಚೀನಾ, ಒರ್ಮಾ ಈ ಎಲ್ಲಾ ರಂಗಗಳಿಗೂ ಎಲ್ಲಾ ಯುದ್ಧ ಸಾಮಗ್ರಿಗಳನ್ನೂ ಸರಬರಾಜು ಮಾಡುವ ಮದ್ದು ಗುಂಡುಗಳ ಕೇಂದ್ರವೊಂದು ಭಾರತದ ಯಾವುದೋ ಮೂಲೆಯಲ್ಲಿ ಇದೆಯಂತೆ. ಇದೆನ್ನ ನೋಡಿಡಬೆ. ಯುದ್ಧದಿಂದ ಎಷ್ಟೊಂದು ಲಕ್ಷಲಾಭವಾಗುವುದೆಂಬ ದಕ್ಕೆ ಇದು ಶಿಲಾಶಾಸನದಂತೆ ನಿಂತಿದೆಯಂತೆ ಈ ಮದ್ದು ಗುಂಡುಗಳ ರಾಶಿ ಎಷ್ಟು ಜಿದ್ದಿದೆಯೆಂದರೆ, ಅ ಪಾಯವಾಗದಂತೆ ಇನನ್ನೆಲ್ಲಾ ಸಟ್ಟು ಹಾಕಬೇಕಾದರೆ ಕನಿಷ್ಟಪಕ್ಷ ಆರು ವರ್ಷಗಳಾದರೂ ಬೇಕಂತೆ. ಶಿಕ್ಷಣ ಶಿಬಿರಗಳಿಗೆ ಬೇಕಾಡಷ್ಟು ಸಂಬರಾಯಿ ಮಾಡಿದರೂ ಸಮುದ್ರವೇ ಗತಿಯಂತೆ ಇವಕ್ಕೆ ! (ಪೌ)

ಹೊಳೇಹೊನ್ನೂರು ಭದ್ರಾ ಸೇತುವೆಯು ಇದ್ದಕ್ಕಿದಂತೆ ಕಳೆದ ವಾರ ಮುರಿದು ಬಿದ್ದು ಇದರಿಂದ 1 ಲಕ್ಷಕ್ಕೆ ಮಾರಿಯೇ ನಷ್ಟವಾಗಿರುವುದಂತೆ.

AT Opera—

From 6-9-45

GEET

(Hindi)

With Sahu Modak & Nirmala

At Ranjit

From 7-9-45

Humayun

ರಣಜಿತ್ ಟಾಕೀಸಿನಲ್ಲಿ

ಮೆಹಬೂಬ್ ಕವರ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ, ನರ್ಗಿಸ್, ಷಾ ನವಾಸ್

ಪಾತ್ರ ವಹಿಸಿರುವರು

ಪ್ರತಿದಿನ 3 ಆಟಗಳು

ಜಪರ್ಷ ಶರಣಾಗತಿಯನ್ನು ಕೇಳಿ ಆರ್.ಏ.ಎಫ್. ವೈಮಾನಿಕರಿಗೆ ಸಂತೋಷ

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಜಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.